**ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸಂಡೂರು.**

ಸಿ. ಸಿ. ಸಂಖ್ಯೆ **378/2021** ಸಿ.ಡಬ್ಲ್ಯೂ **02,** ಪಿ.ಡಬ್ಲ್ಯೂ **01**

| | | |
|---|---|---|
| ಸಾಕ್ಷಿಯ ಹೆಸರು | - ಸುರೇಶ | ದಿನಾಂಕ 10-07-2023 ರಂದು ಪ್ರಮಾಣ ವಚನ ಮಾಡಿಸಲಾಯಿತು. |
| ತಂದೆಯ ಹೆಸರು | - ಸಿದ್ದಪ್ಪ | |
| ವಯಸ್ಸು | - 25 ವರ್ಷ | |
| ಉದ್ಯೋಗ | - ಚಾಲಕ | |
| ವಾಸ ಸ್ಥಳ | - ಕೆ.ಗೊಲ್ಲರಹಟ್ಟಿ | |

**ಮುಖ್ಯ ವಿಚಾರಣೆ ಸಸಅ ರವರಿಂದ**

* * * *

ಸುಮಾರು 2 ವರ್ಷದ ಹಿಂದೆ ಸಂಜೆ 5 ಗಂಟೆಯ ಸಮಯದಲ್ಲಿ ಬಂಡ್ರಿ ಗ್ರಾಮದ ಮಾರಮ್ಮ ದೇವಸ್ಥಾನದ ಹತ್ತಿರ ಪೋಲಿಸರು ಬಂದಿದ್ದರು ಅಲ್ಲಿ ಅಪಘಾತದ ಬಗ್ಗೆ ಪಂಚನಾಮೆಯನ್ನು ಜರುಗಿಸಿ ನನ್ನ ಸಹಿಯನ್ನು ಪಡೆದಿರುತ್ತಾರೆ. ಸಾಕ್ಷಿಯು ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 1 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ 1 ಎ ಎಂದು ಗುರುತಿಸಲಾಯಿತು. ಅಪಘಾತವು ಯಾವ ವಾಹನಗಳೊಂದಿಗೆ ಆಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ನಾನು ಸ್ಥಳದಲ್ಲಿ ವಾಹನಗಳನ್ನು ಗಮನಿಸಿರುವುದಿಲ್ಲ. ಆದರೆ ಅಪಘಾತದಲ್ಲಿ ಒಬ್ಬ ವ್ಯಕ್ತಿ ಮೃತ ಪಟ್ಟಿದ್ದನು. ಅಪಘಾತ ಸ್ಥಳದಲ್ಲಿ ಲಾರಿ ಇರುವುದು ನನಗೆ ಗೊತ್ತಿರುವುದಿಲ್ಲ.

**ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲನ್ನು ಮಾಡಲು ಮಾನ್ಯ ಸಸಅ ರವರು ಅನುಮತಿ ಕೋರಿರುತ್ತಾರೆ, ಅನುಮತಿಸಲಾಯಿತು.**

**ಪಾಟೀ ಸವಾಲು: ಮಾನ್ಯ ಸ.ಸ.ಅ. ರವರಿಂದ.**

ಪೋಲಿಸರು ದಿಃ **24-07-2021** ರಂದು ಸ್ಥಳಕ್ಕೆ ಬಂದಿದ್ದರು ಎಂದರೆ ಸರಿ. ಕೃತ್ಯ ಸ್ಥಳವನ್ನು ಚಾಸಾ **8** ರವರು ತೋರಿಸಿರುತ್ತಾರೆ ಮತ್ತು ಪಂಚನಾಮೆ ಸಮಯದಲ್ಲಿ ಚಾಸಾ **7** ರವರು ಸಹ ಹಾಜರಿದ್ದುರು ಎಂದರೆ ಸರಿಯಲ್ಲ. ಅಪಘಾತವು ಲಾರಿ ನಂಃ ಕೆಎ **35** ಸಿ **6141** ಮತ್ತು ದ್ವಿಚಕ್ರ ವಾಹನ ನಂಃ ಕೆಎ **35** ಇಬಿ **8793** ಗಳ ಮದ್ಯ ಆಗಿದ್ದು ಸದರಿ ವಾಹನಗಳನ್ನು ಪೋಲಿಸರು ಸ್ಥಳದಲ್ಲಿ ಜಪ್ತು ಪಡೆಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಕಚ್ಚಾ ನಾಕಶೆಯಲ್ಲಿರುವ ಸಹಿಯನ್ನು ಗುರುತಿಸಿದ್ದರಿಂದ ಕಚ್ಚಾ ನಾಕಶೆಯನ್ನು ನಿಪಿ **2** ಎಂದು ಸಾಕ್ಷಿಯ ಸಹಿಯನ್ನು ನಿಪಿ **2** ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಕೃತ್ಯ ಸ್ಥಳದಲ್ಲಿ ತೆಗೆದ ಒಟ್ಟು **6** ಪೋಟೊಗಳನ್ನು

ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ 3 ರಿಂದ 8 ಎಂದು ಗುರುತಿಸಲಾಯಿತು. ಸ್ಥಳದಲ್ಲಿ ವಾಹನಗಳನ್ನು ಜಪ್ತು ಪಡೆಸಿಕೊಂಡಿದ್ದರು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು: ಆರೋಪಿ ಪರ ಶ್ರೀ ಹೆಚ್ ಕೆ ಎಸ್ ವಕೀಲರಿಂದ.**

ನಿಪಿ 1 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿರುವುದಿಲ್ಲ. ನಿಪಿ 3 ರಿಂದ 8 ಪೋಟೋಗಳನ್ನು ಘಟನಾ ಸ್ಥಳದಲ್ಲಿ ತೆಗೆದಿರುವುದಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸ ಇದೆ.**

**ಪ್ರ.ದ.ನ್ಯಾ.ದಂ., ಸಂಡೂರು.**